# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017–18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 200 ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23.10.2013
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 02.09.2014
3. 2017–18 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಂಡಿಕೆ (299) ರಲ್ಲಿ ಘೋಷಿಸಿದ ರೀತ್ಯಾ
4. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅದಿಸೂಚನೆ ಪತ್ರ ಸಂಖ್ಯೆ: F.No:J-11011/1/2009-MGNREGA (Pt-III) ದಿನಾಂಕ: 28.02.2017 (ಮಜೂರಿ ಪರಿಷ್ಕರಣೆ)
5. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2017–18ನೇ ಸಾಲಿನ ಪರಿಷ್ಕೃತ ಮಜೂರಿ ದರದನ್ವಯ, ಮಜೂರಿ ದರಗಳನ್ನು ಪರಿಷ್ಕರಿಸಿ (schedule for revised wages), ನೀಡಲಾದ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಪತ್ರ ಸಂಖ್ಯೆ:ಗ್ರಾಅಪ:138:ಉಖಾಯೋ:2017,ದಿನಾಂಕ:09.03.2017
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:27.03.2017 ರಂದು ನಡೆದ ಸಭೆಯನ್ವಯ.

* * * * * *

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದು ಕೇಂದ್ರ ಪುರಸ್ಕೃತ ಹಕ್ಕು ಆಧಾರಿತ, ಬೇಡಿಕೆ ಆಧಾರಿತ ಮತ್ತು ಮಹತ್ವಕಾಂಕ್ಷೆಯ ಯೋಜನೆಯಾಗಿರುತ್ತದೆ. ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ತೋಟಗಾರಿಕೆ ಇಲಾಖೆಯನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸಲಾಗಿದೆ.

ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ತೋಟಗಾರಿಕೆ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಾದ ಸಹಾಯಕ ನಿರ್ದೇಶಕರಿಗೆ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಎಂದು ಘೋಷಿಸಲಾಗಿದೆ ಹಾಗೂ ಸದರಿಯವರ ಲಾಗಿನ್‌ನಲ್ಲಿ ಅಂದಾಜು ಪಟ್ಟಿಗಳ ಫ್ರೀಜಿಂಗ್, ಇ–ಹಾಜರಾತಿ ಪಟ್ಟಿಗಳ ಸೃಜನೆ ಹಾಗೂ ಪಾವತಿ ಮತ್ತು ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ.

2017–18 ನೇ ಸಾಲಿನ ಆಯವ್ಯಯ ಘೋಷಣೆಯ (ಉಲ್ಲೇಖ–3) ಕಂಡಿಕೆ 299 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಪ್ರತಿ ತಾಲ್ಲೂಕಿಗೆ ಕನಿಷ್ಠ 200 ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಮಾಡಲು ಘೋಷಣೆ ಮಾಡಲಾಗಿರುತ್ತದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅನುಸೂಚಿ–1ರ ಕಂಡಿಕೆ–4ರ ಪ್ರವರ್ಗ–ಬಿ ದಡಿ ವ್ಯಕ್ತಿಗತ ಫಲಾನುಭವಿಗಳಿಗೆ ತೋಟಗಾರಿಕೆಯ ಕಾಮಗಾರಿಗಳ ಸೌಲಭ್ಯವನ್ನು ಕಂಡಿಕೆ–5ರಲ್ಲಿ ಸೂಚಿಸಿದ ಅರ್ಹಫಲಾನುಭವಿಗಳ ಜಮೀನಿನಲ್ಲಿ ಅನುಷ್ಠಾನಿಸಲು ಅವಕಾಶ ಕಲ್ಪಿಸಲಾಗಿದೆ. ತೋಟಗಾರಿಕೆಯ ಸಮುದಾಯ ಕಾಮಗಾರಿಗಳನ್ನು ಸಹ ನರೇಗಾ ಅಧಿನಿಯಮದ ಅನುಸೂಚಿ–1ರ ಕಂಡಿಕೆ–4ರ ಪ್ರವರ್ಗ–ಎ (v) ರಡಿ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದೆ. ಈ ಎರಡರ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಈ ಯೋಜನೆಯಡಿ ಅನುಷ್ಠಾನಗೊಳಿಸ ಬಹುದಾಗಿರುತ್ತದೆ.

ಕೇಂದ್ರ ಸರ್ಕಾರವು ವ್ಯಕ್ತಿಗತ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಳ್ಳಲು ಹಾಗೂ ಅನುಷ್ಠಾನ ಇಲಾಖೆಗಳ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಕೃಷಿ ಮತ್ತು ಕೃಷಿಯೇತರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚು ಒತ್ತನ್ನು ನೀಡಿದೆ.

ರಾಜ್ಯ ಸರ್ಕಾರವು 2017-18 ನೇ ಸಾಲಿನ ಆಯವ್ಯಯ ಕಂಡಿಕೆ 299 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಮತ್ತು ತೋಟಗಾರಿಕೆ ಇಲಾಖಾ ಯೋಜನೆಗಳನ್ನು ಒಗ್ಗೂಡಿಸಿ, ಪ್ರತಿ ತಾಲ್ಲೂಕಿಗೆ ಕನಿಷ್ಠ 200 ಸಂಖ್ಯೆಯ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಘೋಷಣೆ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ, 2017-18ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ತೋಟಗಾರಿಕೆ ಇಲಾಖಾ ಯೋಜನೆಗಳನ್ನು ಒಗ್ಗೂಡಿಸಿ, ಪ್ರತಿ ತಾಲ್ಲೂಕಿಗೆ ಕನಿಷ್ಠ 200 ಸಂಖ್ಯೆಯಂತೆ ರಾಜ್ಯದಲ್ಲಿ ಒಟ್ಟು 35,200 ಸಂಖ್ಯೆಯ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 251 ಉಖಾಯೋ 2017 ಬೆಂಗಳೂರು ದಿನಾಂಕ: 12.04.2017**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2017-18 ನೇ ಸಾಲಿನಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ತೋಟಗಾರಿಕೆ ಇಲಾಖಾ ಯೋಜನೆಗಳನ್ನು ಒಗ್ಗೂಡಿಸಿ, ಪ್ರತಿ ತಾಲ್ಲೂಕಿಗೆ ಕನಿಷ್ಠ 200 ಕಾಮಗಾರಿಗಳಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ (ಅನುಬಂಧ-1) ಒಟ್ಟು 35,200 ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಅನುಷ್ಠಾನಗೊಳಿಸಲು ಮತ್ತು ಘೋಷಿತ ಕಾರ್ಯಕ್ರಮವನ್ನು ಈ ಯೋಜನೆಯ ಅಧಿನಿಯಮದ ಅನುಸೂಚಿ-1ರ ಕಂಡಿಕೆ-4ರ ಪ್ರವರ್ಗ-ಬಿ ಅಡಿ ಅವಕಾಶ ಕಲ್ಪಿಸಿದಂತೆ ಕಂಡಿಕೆ-5ರಲ್ಲಿ ಸೂಚಿಸಿರುವ ಅರ್ಹ ಫಲಾನುಭವಿಗಳ ಜಮೀನುಗಳಲ್ಲಿ ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

1. ಎಂ.ಜಿ.ಎನ್.ಆರ್.ಇ.ಜಿ.ಎ. ಅನುಸೂಚಿ – 1 ಮತ್ತು ಅನುಸೂಚಿ-2 ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳಂತೆ ಕಾಮಗಾರಿಗಳಿಗೆ ಕ್ರಿಯಾಯೋಜನೆ ತಯಾರಿಸಿಕೊಂಡು ನಿಯಮಾನುಸಾರ ಗ್ರಾಮ ಸಭೆ ಹಾಗೂ ಜಿಲ್ಲಾ ಕಾರ್ಯಕ್ರಮ ಸಂಯೋಜಕರ (DPC) ಮಂಜೂರಾತಿ ಪಡೆದುಕೊಳ್ಳುವುದು.

2. 2017ನೇ ಮಳೆಗಾಲದಲ್ಲಿ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾಗಿದೆ. ಆದ್ದರಿಂದ, ಹೊಸದಾಗಿ ಗುರುತಿಸಿರುವ ಕಾಮಗಾರಿಗಳ/ಫಲಾನುಭವಿಗಳ ವಿವರಗಳೊಂದಿಗೆ ಕ್ರಿಯಾ ಯೋಜನೆ ತಯಾರಿಸಿ, end2endnrega.in ನಲ್ಲಿ ಏಪ್ರಿಲ್ 2017 ರೊಳಗೆ ದಾಖಲಿಸಿ, ಯೋಜನೆಯ ನಿಯಮಾನುಸಾರ ಅನುಮೋದನೆ ಪಡೆಯುವುದು.

3. 2014-15, 2015-16 ಹಾಗೂ 2016-17 ನೇ ಸಾಲಿನಲ್ಲಿ ಗ್ರಾಮ ಸಭೆ ಹಾಗೂ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಿಂದ ಮಂಜೂರಾತಿ ಆಗಿರುವ ಕಾಮಗಾರಿಗಳನ್ನು 2017-18 ನೇ ಸಾಲಿನ ಕೂಲಿ ದರ ಹಾಗೂ ಪರಿಷ್ಕೃತ SoR ಅನ್ವಯ ಅನುಷ್ಠಾನಗೊಳಿಸತಕ್ಕದ್ದು.

4. ತೋಟಗಾರಿಕೆ ಕಾಮಗಾರಿಗಳನ್ನು ಅನುಮೋದಿತ ಮಾದರಿ ಅಂದಾಜು ಪಟ್ಟಿಗಳನ್ವಯ ಅನುಷ್ಠಾನಗೊಳಿಸುವುದು. ಇದಕ್ಕೆ ಅವಶ್ಯಕವಿರುವ ಸೂಕ್ತ ಮಾದರಿ ಅಂದಾಜು ಪತ್ರಿಕೆಗಳನ್ನು ಆಯುಕ್ತರು, ತೋಟಗಾರಿಕೆ ಇಲಾಖೆಯವರ ಹಂತದಲ್ಲಿ ಹೊರಡಿಸಬಹುದಾಗಿರುತ್ತದೆ. ಪರಿಷ್ಕೃತ ದಿನಗೂಲಿ ದರ ಮತ್ತು ಪರಿಷ್ಕೃತ SoR ಅನ್ವಯ ಮಳೆಗಾಲದ ಮುಂಚೆ ಮತ್ತು ಮಳೆಗಾಲದ ನಂತರ ಅನುಷ್ಠಾನಿಸುವುದಾದಲ್ಲಿ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಂಡು ಅನುಷ್ಠಾನಿಸುವುದು.

5. ಸ್ಥಳೀಯ ತೋಟಗಾರಿಕೆ ಬೆಳೆಗಳಿಗೆ ಆದ್ಯತೆ ನೀಡುವುದು ಮತ್ತು ಅರ್ಹ ರೈತರಿಗೆ ಆರ್ಥಿಕ ಸಬಲತೆಯನ್ನು ಹೆಚ್ಚಿಸುವ ಬೆಳೆಗಳಿಗೆ ಪ್ರಾಮುಖ್ಯತೆ ನೀಡುವುದು. ಮಣ್ಣು ಮತ್ತು ಹವಾಮಾನಗಳನ್ನು ಗಮನದಲ್ಲಿಟ್ಟುಕೊಂಡು ತೋಟದ ಬೆಳೆಗಳ ಕಾಮಗಾರಿಗಳನ್ನು ನಿರ್ಧರಿಸುವುದು.

6. ಈ ಕಾಮಗಾರಿಗಳು ಋತುಮಾನ ಆಧಾರಿತವಾಗಿದ್ದು, ಮಳೆಗಾಲ ಮುಗಿಯುವುದರೊಳಗೆ ಅನುಷ್ಠಾಗೊಳಿಸುವುದು.

7. ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರದತ್ತವಾದಂತೆ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ನೀಡಿ, ಕಾಮಗಾರಿಗಳನ್ನು ಚಾಲನೆ ಮಾಡುವುದು.

8. ಈ ಕಾಮಗಾರಿಗಳು ತೋಟಗಾರಿಕೆ ಇಲಾಖೆ ಲಾಗಿನ್‌ನಿಂದ ಅನುಷ್ಠಾನ ಮಾಡತಕ್ಕದ್ದು. ಹೆಚ್ಚಿನ ತೋಟಗಾರಿಕೆ ಕಾಮಗಾರಿಗಳನ್ನು/ಅರ್ಹಫಲಾನುಭವಿಗಳು ಇದ್ದಲ್ಲಿ ಕಾಮಗಾರಿಗಳನ್ನು ಇಲಾಖಾ ಲಾಗಿನ್ ಅಥವಾ ಪಂಚಾಯತ್ ಲಾಗಿನ್‌ನಿಂದ ನಿರ್ವಹಿಸಬೇಕಾಗಿರುತ್ತದೆ. ತೋಟಗಾರಿಕೆ ಇಲಾಖೆಯು ಅನುಷ್ಠಾನ ಮಾಡುವ ಎಲ್ಲಾ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿಗಳ ಶೇಕಡ 60:40 ರ ಅನುಪಾತವನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.

9. ವೈಯಕ್ತಿಗತ ಕಾಮಗಾರಿಗಳ ಅನುಷ್ಠಾನ ಮೂರು ಹಂತಗಳ Geo Tagging ದಿನಾಂಕ ಸಹಿತ ಛಾಯಚಿತ್ರಗಳನ್ನು ಕಡ್ಡಾಯವಾಗಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಕಾಮಗಾರಿಗಳ ಸ್ಥಳದಲ್ಲಿ ಕಡ್ಡಾಯವಾಗಿ ನಾಮಫಲಕಗಳನ್ನು ಅಳವಡಿಸುವುದು. ನಾಮಫಲಕಗಳಿಗೆ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ಸೇರಿಸುವುದು ಮತ್ತು ಇದರ ವೆಚ್ಚವನ್ನು ಶೇಕಡ 40ರಷ್ಟಿನ ಸಾಮಗ್ರಿ ಘಟಕದಲ್ಲಿ ಭರಿಸತಕ್ಕದ್ದು.

10. ವೈಯಕ್ತಿಗತ ಫಲಾನುಭವಿಗಳಿಗೆ ಅವರ ಹೆಸರಿನಲ್ಲಿ e-NMR ಗಳನ್ನು ವಿತರಿಸಿ ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಸಂದಾಯಕ್ಕೆ e-FMS ಮೂಲಕ ಕ್ರಮವಹಿಸುವುದು.

11. ಕೂಲಿ ಮೊತ್ತವನ್ನು NMR ಮುಕ್ತಾಯದ ದಿನಾಂಕದಿಂದ ಒಂದು ವಾರದೊಳಗೆ ಕಡ್ಡಾಯವಾಗಿ ಮಾಡತಕ್ಕದ್ದು. ಅಂದರೆ, NMR ಮುಕ್ತಾಯದ ದಿನಾಂಕದಿಂದ ಒಂದು ವಾರದೊಳಗೆ ಮೊದಲ ಮತ್ತು ಎರಡನೆಯ ಸಹಿದಾರರಿಂದ ಎಫ್.ಟಿ.ಓ. ಕಡ್ಡಾಯವಾಗಿ ಸೃಜನೆಯಾಗಿರಬೇಕು.

12. ವೈಕ್ತಿಗತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಥಮ ಆಧ್ಯತೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿ ನಂತರ ಉಳಿದ ಅರ್ಹ ಫಲಾನುಭವಿಗಳಿಗೆ ಆಧ್ಯತೆ ನೀಡುವುದು.

13. ನೀರಿನ ಸೌಲಭ್ಯವಿರುವ ಎಲ್ಲಾ ನರೇಗ ಪ್ರದೇಶ ವಿಸ್ತರಣೆ ತಾಕುಗಳೊಂದಿಗೆ ತೋಟಗಾರಿಕೆ ಇಲಾಖಾ ಯೋಜನೆಯಡಿ ಹನಿ ನೀರಾವರಿ ಸೌಲಭ್ಯ ಘಟಕವನ್ನು ಒಗ್ಗೂಡಿಸಿ ಅನುಷ್ಠಾನಿಸುವುದು.

14. ಈರುಳ್ಳಿ ಬೆಳೆಯುವ ಪ್ರದೇಶಗಳಲ್ಲಿ ಯೋಜನೆಯಡಿ ಈರುಳ್ಳಿ ಶೇಖರಣಾ ಘಟಕವನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳುವುದು. 10 MT ಮತ್ತು 25 MT ಸಾಮರ್ಥ್ಯದ ಈರುಳ್ಳಿ ಶೇಖರಣಾ ಘಟಕಗಳನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾಗೊಳಿಸುವುದು.

15. ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ನಿರ್ವಹಿಸುವುದು. ಸದರಿ ಕಡತದಲ್ಲಿ ಆಯುಕ್ತಾಲಯದಿಂದ ತಿಳಿಸಿದ 21 ದಾಖಲೆಗಳನ್ನು ನಿರ್ವಹಿಸುವುದು.

16. 2017 ನೇ ಮಳೆಗಾಲದಲ್ಲಿ ಅನುಷ್ಠಾನಿಸ ಬೇಕಾದ ತೋಟಗಾರಿಕೆ ಕಾಮಗಾರಿಗಳಿಗೆ ಅವಶ್ಯವಾದ ಸಸಿಗಳ ಲಭ್ಯತೆಗೆ ಮುಂಚೆಯೇ ಅವಶ್ಯ ಕ್ರಮ ಕೈಗೊಳ್ಳುವುದು.

17. ಯೋಜನೆಯ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಋಣಾತ್ಮಕ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ. (ಕಾರ್ಯಾಚರಣೆಯ ಮಾರ್ಗಸೂಚಿಗಳು 2013 ರ 4 ನೇ ಆವೃತ್ತಿ – ಅಧ್ಯಾಯ – 7 ರ ಕಂಡಿಕೆ 7.3)

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

12/04/2017

**(ಎಸ್.ರಂಗನಗೌಡ)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

ಪ್ರತಿಯನ್ನು:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ಸರ್ಕಾರದ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು
7. ಪ್ರಾದೇಶಿಕ ಆಯುಕ್ತರು ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು
10. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು
11. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
12. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
13. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
14. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
15. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
16. ಆಯುಕ್ತರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
17. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು
18. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು
19. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ), ಬೆಂಗಳೂರು / ಬಿಜಾಪುರ
20. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
21. ವಿಶೇಷ ಆಯುಕ್ತರು, ಎಂ.ಜಿ.ಎನ್.ಆರ್.ಇ.ಜಿ.ಎ., ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಇಲಾಖೆ
22. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಇಲಾಖೆ
23. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
24. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
25. ಮುಖ್ಯ ಆರ್ಥಿಕ ಸಲಹೆಗಾರು / ಜಂಟಿ ನಿರ್ದೇಶಕರು, ತೋಟಗಾರಿಕೆ / ತಾಂತ್ರಿಕ / ಆಡಳಿತ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
26. ರಾಜ್ಯದ ಎಲ್ಲಾ ಜಿಲ್ಲೆಗಳ ಉದ್ಯೋಗ ಖಾತರಿ ಯೋಜನೆಯ ಒಂಬುಡ್ಸ್‌ಮನ್‌ಗಳಿಗೆ
27. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
28. ವಿಶೇಷಾಧಿಕಾರಿ ಗಣಕಕೋಶ, ಗ್ರಾಅಪ ಇಲಾಖೆ ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
29. ಶ್ರೀ.ಮುಬಾರಕ್ ಅಹಮದ್, ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
30. M/s Effia Technologies, ಅವರಿಗೆ www.end2endsolutions.com ನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
31. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಇಲಾಖೆ, ಕಾವೇರಿ ಭವನ, ಬೆಂಗಳೂರು.
32. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ

## ಅನುಬಂಧ – 1

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:251:ಉಖಾಯೋ:2017, ಬೆಂಗಳೂರು. ದಿನಾಂಕ:12.04.2017**

**2017–18ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳ ವಿವರ**

| ಕ್ರ.ಸಂ. | ಜಿಲ್ಲೆ /ವಿಭಾಗ | ತಾಲ್ಲೂಕು (ಸಂಖ್ಯೆ) | ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳು (ಸಂಖ್ಯೆ) |
|---|---|---|---|
| 1 | ಬಾಗಲಕೋಟೆ | 6 | 1200 |
| 2 | ಬೆಂಗಳೂರು ನಗರ | 4 | 800 |
| 3 | ಬೆಂಗಳೂರು ಗ್ರಾಮಾಂತರ | 4 | 800 |
| 4 | ಬೆಳಗಾಂ | 10 | 2000 |
| 5 | ಬಳ್ಳಾರಿ | 7 | 1400 |
| 6 | ಬೀದರ್ | 5 | 1000 |
| 7 | ವಿಜಯಪುರ | 5 | 1000 |
| 8 | ಚಾಮರಾಜನಗರ | 4 | 800 |
| 9 | ಚಿಕ್ಕಬಳ್ಳಾಪುರ | 6 | 1200 |
| 10 | ಚಿಕ್ಕಮಗಳೂರು | 7 | 1400 |
| 11 | ಚಿತ್ರದುರ್ಗ | 6 | 1200 |
| 12 | ದಕ್ಷಿಣ ಕನ್ನಡ | 5 | 1000 |
| 13 | ದಾವಣಗೆರೆ | 6 | 1200 |
| 14 | ಧಾರವಾಡ | 5 | 1000 |
| 15 | ಗದಗ | 5 | 1000 |
| 16 | ಕಲ್ಬುರ್ಗಿ | 7 | 1400 |
| 17 | ಹಾಸನ | 8 | 1600 |
| 18 | ಹಾವೇರಿ | 7 | 1400 |
| 19 | ಕೊಡಗು | 3 | 600 |
| 20 | ಕೋಲಾರ | 5 | 1000 |
| 21 | ಕೊಪ್ಪಳ | 4 | 800 |
| 22 | ಮಂಡ್ಯ | 7 | 1400 |
| 23 | ಮೈಸೂರು | 7 | 1400 |
| 24 | ರಾಯಚೂರು | 5 | 1000 |
| 25 | ರಾಮನಗರ | 4 | 800 |
| 26 | ಶಿವಮೊಗ್ಗ | 7 | 1400 |
| 27 | ತುಮಕೂರು | 10 | 2000 |
| 28 | ಉಡುಪಿ | 3 | 600 |
| 29 | ಉತ್ತರ ಕನ್ನಡ | 11 | 2200 |
| 30 | ಯಾದಗಿರಿ | 3 | 600 |
| ಒಟ್ಟು | | **176** | **35200** |

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ